**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫಸಿ ನ್ಯಾಯಾಲಯ, ರಾಣೇಬೆನ್ನೂರು.**

**ಸಿ ಸಿ ನಂಬರಃ 4364/ 2024**

**ಫಿರ್ಯಾದಿ** – ಸರಕಾರ

**–ವಿರುದ್ಧ–**

**ಆರೋಪಿ** – ಶಿವರಾಜ ಪರಸಪ್ಪ ಉಜನಿ,
ವಯಾಃ 30 ವರ್ಷ, ಉದ್ಯೋಗಃ ಕೂಲಿ,
ವಾಸಃ ಹರಳಯ್ಯ ನಗರ, ರಾಣೇಬೆನ್ನೂರು.

## – ದೋಷಾರೋಪಣೆ –

ನಾನು ಶ್ರೀ ಮಂಜುನಾಥ ಎಂ ಎಸ್, ಬಿ.ಎ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫಸಿ ನ್ಯಾಯಾಲಯ, ರಾಣೇಬೆನ್ನೂರು.

ಮೊದಲನೆಯದಾಗಿ ದಿನಾಂಕಃ 03–10–2024 ರಂದು 20–55 ಗಂಟೆಯ ಸುಮಾರಿಗೆ ರಾಣೇಬೆನ್ನೂರು ಶಹರ ಪೋಲಿಸ ಠಾಣಾ ಹದ್ದಿಯ ಪೈಕಿ ರಾಣೇಬೆನ್ನೂರು ಶಹರದ ಹರಳಯ್ಯ ನಗರ ದಲ್ಲಿ ನಾಗಪ್ಪ ಮರಿಯಪ್ಪ ಉಜನಿ ಇವರ ಮನೆಯಲ್ಲಿ ಹಿರಿಯರ ಹಬ್ಬ ಮಾಡಿದ್ದರಿಂದಾ ಲೋಬಾನ ಹಾಕಲು ಪಿರ್ಯಾದಿದಾರನು ಬಂದಿದ್ದು ಆ ಕಾಲಕ್ಕೆ ಆರೋಪಿತನು ಪಿರ್ಯಾದಿಗೆ ಲೇ ಬೋಸುಡಿ ಮಗನಾ ನಿನ್ನ ತಾಯಿನಾ ಹಡಾ ನೀನು ಯಾಕೆ ಇಲ್ಲಿಗೆ ಬಂದೀ ನಮ್ಮ ಮೇಲೆ ಕೇಸ್ ಮಾಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ ಅಪರಾಧಕ್ಕಾಗಿ ನೀನು ಬಿ.ಎನ್.ಎಸ್ ಕಾಯ್ದೆ 352 ರನ್ವಯ ಶಿಕ್ಷಾರ್ಹ ಅಪರಾಧವೆಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತನಾದ ಅಲ್ಲಿಯೇ ಇದ್ದ ದೀಪದ ಸಮೆಯಿಂದ ಪಿರ್ಯಾದಿಯ ಎಡತಲೆಯ ಮೇಲೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ ಅಪರಾಧಕ್ಕಾಗಿ ನೀನು ಬಿ.ಎನ್.ಎಸ್ ಕಾಯ್ದೆ 118(1) ರನ್ವಯ ಶಿಕ್ಷಾರ್ಹ ಅಪರಾಧವೆಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಅರೋಪಿತನು ಪಿರ್ಯಾದಿದಾರರಿಗೆ ಇದ್ದವರು ಬಿಡಿಸ್ಯಾರ ಅಂತಾ ಸುಮ್ಮನೇ ಬಿಟೇನಿ ಇನ್ನೊಮ್ಮೆ ಸಿಗು ನಿನ್ನನ್ನು ಕೊಂದು ಮುಂದಿನ ಕೆಲಸ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ ಅಪರಾಧಕ್ಕಾಗಿ

ನೀನು ಬಿ.ಎನ್.ಎಸ್ ಕಾಯ್ದೆ 351(2) ರನ್ವಯ ಶಿಕ್ಷಾರ್ಹ ಅಪರಾಧವೆಸೆಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಈ ಮೇಲಿನ ಆರೋಪಗಳನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ಪ್ರಶ್ನೆ-1 : ಈಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತಾ?
ಉತ್ತರಃ

ಪ್ರಶ್ನೆ-2: ಸದರಿ ಆರೋಪವನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಬಯಸುತ್ತಿರಾ?

ಉತ್ತರಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿದ ನಂತರ ಅವನ ಉತ್ತರಗಳನ್ನು ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

**ಸ್ಥಳ : ರಾಣೆಬೆನ್ನೂರು** **2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ದಿನಾಂಕ : 16/04/2025** **ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು.**